1991-92	121	15
1992-93	123	11
1993-94	186	16
ಒಟ್ಟು	577	55

ಆ) ಸಂಬಂಧಪಟ್ಟ ನಿಯಮಗಳಲ್ಲಿ ಎಚ್ಚರಿಕೆಯು ಒಂದು ದಂಡನೆಯಲ್ಲ. ಕಾನೂನಿನಲ್ಲಿ ಶಿಕ್ಷಿಸಲು ಅಥವಾ ಬಿಡುಗಡೆ ಹೊಂದಲು ಅವಕಾಶವನ್ನು ಕಲ್ಪಿಸಿದೆ. ಎರಡು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಿದ್ದು ಅವುಗಳ ಪೈಕಿ ಒಂದು ಪ್ರಕರಣದಲ್ಲಿ 6 ತಿಂಗಳು ಕಠಿಣ ಶಿಕ್ಷೆ ಮತ್ತು ರೂ. 5,000-00 ದಂಡ ವಿಧಿಸಿದ್ದು, ದಂಡ ತೆರಲು ತಪ್ಪಿದಲ್ಲಿ ಪುನಃ 6 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ. ಇನ್ನೊಂದು ಪ್ರಕರಣದಲ್ಲಿ ಒಂದು ವರ್ಷ ಕಠಿಣ ಶಿಕ್ಷೆ ಮತ್ತು ರೂ. 5,000-00 ದಂಡ ವಿಧಿಸಿದ್ದು, ದಂಡ ತೆರಲು ತಪ್ಪಿದಲ್ಲಿ 6 ತಿಂಗಳು ಕಠಿಣ ಸಜೆ ವಿಧಿಸಲಾಗಿದೆ.

ಇ) - ಇಲ್ಲ -

ಈ) - 213 ಕೇಸುಗಳು -

ಮೇಲುಕೋಟೆ ಮತ್ತು ತೊಣ್ಣೂರು ಕ್ಷೇತ್ರಗಳಲ್ಲಿ ಪ್ರವಾಸಿಗರಿಗೆ ಸೌಲಭ್ಯ

109 - ಶ್ರೀ ಡಿ. ಹಲಗೇಗೌಡ (ಪಾಂಡವಪುರ) : ಮಾನ್ಯ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಮ್ಮ ನಾಡಿನ ಪ್ರಸಿದ್ಧ ಯಾತ್ರಾ ಸ್ಥಳಗಳಾದ ಮೇಲುಕೋಟೆ ಮತ್ತು ತೊಣ್ಣೂರು ಕ್ಷೇತ್ರಗಳು ಪ್ರವಾಸಿಗರ ಸೌಲಭ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಎರಡೂ ಕ್ಷೇತ್ರಗಳು ಪ್ರವಾಸೋದ್ಯಮ ದೃಷ್ಟಿಯಿಂದ ಯಾತ್ರಾರ್ಥಿಗಳು ಮತ್ತು ಪ್ರವಾಸಿಗಳನ್ನು ಆಕರ್ಷಿಸುವ ಕೇಂದ್ರಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ಎರಡೂ ಮುಖ್ಯ ಕ್ಷೇತ್ರಗಳನ್ನು ಪ್ರವಾಸೋದ್ಯಮ ಕೇಂದ್ರಗಳನ್ನಾಗಿ ಪರಿಗಣಿಸಲಾಗುವುದೇ?*

ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಪರಿಶಿಷ್ಟ ಜಾತಿ ಮತ್ತು ಪಂಗಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಥವದರ್ಜೆ, ದ್ವಿತೀಯ ದರ್ಜೆ ಹುದ್ದೆಗಳ ನೇಮಕಾತಿ

31 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ಪದವೀಧರರಿಗೆ ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ನೇಮಿಸಿಕೊಳ್ಳಲಾಗುವುದೆಂಬ ಸರ್ಕಾರಿ ಆದೇಶದಂತೆ ಯಾವ ಯಾವ ವರ್ಷ ಎಷ್ಟು ಜನರನ್ನು ನೇಮಿಸಿಕೊಳ್ಳಲಾಗಿದೆ. (ವಿವರವನ್ನೊದಗಿಸುವುದು).*

ಅ) ಎರಡನೆ ವರ್ಷ ಹುದ್ದೆಗಳನ್ನು ತುಂಬಲು ಸಂದರ್ಶನ ನಡೆಸಿ ನಂತರ ಆ ಹುದ್ದೆಗಳನ್ನು ಲೋಕ ಸೇವಾ ಆಯೋಗಕ್ಕೆ ಮುಂಚಿತವಾಗಿ ಕಳುಹಿಸಿಕೊಟ್ಟಿದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅನ್ಯಾಯವಾಗಿಲ್ಲವೆ.

ಆ) ಈ ಜನಾಂಗಗಳ ಪ್ರತಿಭಾವಂತ ಪದವೀಧರರಿಗೆ ಹುದ್ದೆಗಳನ್ನು ಕೊಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1982-83 1983-84

44 07

ಆ) ಈ ರೀತಿ ಆಗಿಲ್ಲ.

ಇ) 1984-85ರಿಂದ 1993-94ಶೈಕ್ಷಣಿಕ ವರ್ಷಗಳಿಗೆ ಸಂಬಂಧಿಸಿದ ನೇಮಕಾತಿಯನ್ನು ಒಂದೇ ಬಾರಿಗೆ ಮಾಡುವ ಕ್ರಮ ತೆಗೆದುಕೊಂಡು ಈ ಪ್ರಕ್ರಿಯೆಯನ್ನು ಆದ್ಯತೆ ಮೇಲೆ ಮಾಡಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಾಮಗಾರಿ ಕೆಲಸ

649 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀಳಿತಾಯ, ಲಾಟರಿ, ಕೆ.ಜಿ.ಐ.ಡಿ. ಹಾಗೂ ಹೆಚ್.ಕೆ.ಡಿ.ಬಿ. ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಯೋಜನೆಯಡಿಯಲ್ಲಿ ಪ್ರತಿ ಕ್ಷೇತ್ರಕ್ಕೆ ಜಿಲ್ಲಾ ಪಂಚಾಯತಿ ಕಾಮಗಾರಿಗಳಿಗಾಗಿ ಬಾಸಕರಿಗೆ ನೀಡಿರುವ ಅಧಿಕಾರವ ಹಣ ಪ್ರಾರಂಭದಿಂದಲೂ 1993-94ನೇ ಸಾಲಿನವರೆಗೂ ಮಂಜೂರು ಮಾಡಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು? (ವಿವರ ನೀಡುವುದು)

ಶ್ರೀ ಮದನಗೋಪಾಲ ನಾಯಕ್ (ಸಣ್ಣ ನೀಳಿತಾಯ, ಲಾಟರಿ, ಕೆ.ಜಿ.ಐ.ಡಿ. ಹಾಗೂ ಹೆಚ್.ಕೆ.ಡಿ.ಬಿ. ರಾಜ್ಯ ಸಚಿವರು) :

ಅ) ಸದರಿ ಮಾಹಿತಿಯು ಈ ಕೆಳಕಂಡಂತೆ ಇದೆ :

ಕ್ರ. ಸಂ.	ವಿಧಾನ ಸಭಾ ಮತ ಕ್ಷೇತ್ರ	1993-94ನೇ ಸಾಲಿನವರೆಗೆ ಮಂಜೂರಾದ ಕಾಮಗಾರಿಗಳ ಒಟ್ಟು ಮೊತ್ತ (ಲಕ್ಷ ರೂ.ಗಳಲ್ಲಿ)	ಜುಲೈ 94 ರವರೆಗೆ ಆದ ಖರ್ಚು (ಲಕ್ಷ ರೂ.ಗಳಲ್ಲಿ
1	2	3	4
1.	ಗುರುಮಿಟ್ಕಲ್	179.53	97.11
2.	ಕಮಲಾಪುರ	211.85	56
3.	ಆಳಂದ	214.89	141.03
4.	ಶಹಾಬಾದ್	190.95	105.24
5.	ಜೇವರ್ಗಿ/ಸುರಪುರ	190.19	123.18